ಅ) ಜನರಿಗೆ ಪರಿಶುದ್ಧ ಹಾಲು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಸವರಾಜ್ ಪಾಟೀಲ್:- (ಪಶು ಸಂಗೋಪನಾ, ಪಶು ವೈದ್ಯ ಸೇವಾ ಸಚಿವರು)

ಆ) ಕರ್ನಾಟಕ ಹಾಲು ಮಹಾ ಮಂಡಳಿಯ ವ್ಯಾಪ್ತಿಯಲ್ಲಿ ಬರುವ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಉತ್ಪಾದಕರಿಂದ ಶೇಖರಿಸುವ ಹಾಲಿನ ಗುಣಮಟ್ಟವನ್ನು ದಿನಂ ಪ್ರತಿ ಎರಡು ಬಾರಿ ಸಂಘದಲ್ಲಿಯೇ ಪರೀಕ್ಷಿಸಿ, ಶುದ್ಧ ಹಾಲನ್ನು ಶೇಖರಿಸಿ ಸಮೀಪದ ಹಾಲು ಶೀಥಲೀಕರಣ ಕೇಂದ್ರ ಹಾಗೂ ಡೇರಿಗಳಿಗೆ ಸಾಗಿಸಲಾಗುತ್ತಿದೆ. ಈ ಹಾಲನ್ನು ಶೀಥಲೀಕರಣ ಕೇಂದ್ರ ಮತ್ತು ಡೇರಿಗಳಲ್ಲಿ ಮತ್ತೊಮ್ಮೆ ಅದರ ಗುಣಮಟ್ಟವನ್ನು ಪರೀಕ್ಷೆಮಾಡಿ ವೈಜ್ಞಾನಿಕ ರೀತಿಯಲ್ಲಿ ಪಾಶ್ಚೀಕರಿಸಿ ಪ್ಯಾಕೆಟ್‌ಗಳಲ್ಲಿ ಭರ್ತಿಮಾಡಿ ಗ್ರಾಹಕರಿಗೆ ಮಾರಾಟ ಮಾಡಲಾಗುತ್ತಿದೆ. ಸಂಘ ಮತ್ತು ಡೇರಿಗಳಲ್ಲಿ ಹಾಲಿನ ಗುಣ ಮಟ್ಟವನ್ನು ಪರೀಕ್ಷಿಸಲು ಸೂಕ್ತ ತಾಂತ್ರಿಕ ವರ್ಗದವರನ್ನು ನೇಮಿಸಲಾಗಿದೆ. ಇದಲ್ಲದೆ ಚಟುವಟಿಕೆಗಳ ಮೂಲಕ ಹಾಲು ಉತ್ಪಾದಕರಿಗೆ ಶುದ್ಧ ಹಾಲು ಶೇಖರಣೆ ಬಗ್ಗೆ ಮತ್ತು ಉತ್ಪಾದನೆ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ.

ಬರಪರಿಹಾರ ಕಾಮಗಾರಿಗಳಿಗೆ ಬಿಡುಗಡೆಯಾದ ಹಣ

607 (1140) ಶ್ರೀ ದಿವಟರ ಮಲ್ಲಿಕಾರ್ಜುನ ಬಸಪ್ಪ:- (ಕೊಪ್ಪಳ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) 1991-92 ನೇ ಸಾಲಿಗೆ ರಾಜ್ಯ ಸರ್ಕಾರದಿಂದ ಬರ ಪರಿಹಾರ ಕಾಮಗಾರಿಗಳಿಗೆ ಬಿಡುಗಡೆ ಮಾಡಿದ ಮೊತ್ತವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

(ಆ) ಬರಪರಿಹಾರ ಕಾಮಗಾರಿಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಕೈಗೊಂಡಿರುವ ಕೆಲಸಗಳಾವುವು; (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.- (ಕಂದಾಯ ಮಂತ್ರಿಗಳು)

ಅ) ರೂ. 1444.00 ಲಕ್ಷಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಬಿಡುಗಡೆ ಮಾಡಿರುವ ಮೊತ್ತ (ರೂ. ಲಕ್ಷಗಳಲ್ಲಿ)
(1)	ಬೆಂಗಳೂರು ನಗರ	41.50
(2)	ಬೆಂಗಳೂರು ಗ್ರಾಮಾಂತರ	35.00
(3)	ಕೋಲಾರ	54.50
(4)	ತುಮಕೂರು	28.50
(5)	ಚಿತ್ರದುರ್ಗ	46.00
(6)	ಶಿವಮೊಗ್ಗ	21.50
(7)	ಮೈಸೂರು	42.50
(8)	ಮಂಡ್ಯ	37.50
(9)	ಚಿಕ್ಕಮಗಳೂರು	32.50
(10)	ಹಾಸನ	33.50
(11)	ಕೊಡಗು	11.00
(12)	ದಕ್ಷಿಣ ಕನ್ನಡ	28.00
(13)	ಗುಲ್ಬರ್ಗಾ	263.50

(14)	ಬೀದರ್	170.50
(15)	ರಾಯಚೂರು	144.50
(16)	ಬಳ್ಳಾರಿ	117.50
(17)	ಬೆಳಗಾಂ	72.00
(18)	ಬಿಜಾಪುರ	163.00
(19)	ಧಾರವಾಡ	71.30
(20)	ಉತ್ತರ ಕನ್ನಡ	30.50
	ಒಟ್ಟು ರೂ.	1444.00 ಲಕ್ಷಗಳು

ಆ) ಕುಡಿಯುವ ನೀರಿನ ಪೂರೈಕೆ, ಉದ್ಯೋಗ ಸೃಜನೆ, ರಸ್ತೆ ಮತ್ತು ಸೇತುವೆ ರಿಪೇರಿ ಇತ್ಯಾದಿ ಕಾಮಗಾರಿಗಳನ್ನು ಕೈಗೊಂಡಿದೆ. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ.

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಸಣ್ಣ ನೀರಾವರಿ ಕಾಮಗಾರಿಗಳು	ಕಟ್ಟಡಗಳ ದುರಸ್ತಿ	ಕುಡಿಯುವ ನೀರಿನ ಪೂರೈಕೆ	ಭೂ ಸಂರಕ್ಷಣೆ ಕಾಮಗಾರಿಗಳು	ಇತರಿ
(1)	(2)	(3)	(4)	(5)	(6)	(7)
1.	ರಾಯಚೂರು	2	2	4	-	4
2.	ಮಾನ್ವಿ	2	1	2	-	7
3.	ದೇವದುರ್ಗ	2	1	-	-	1
4.	ಲಿಂಗಸೂಗೂರು	2	2	-	1	–
5.	ಸಿಂಧನೂರು	1	-	-	-	1
6.	ಕುಷ್ಟಗಿ	3	2	6	-	1
7.	ಕೊಪ್ಪಳ	-	-	-	-	-
8.	ಗಂಗಾವತಿ	-	-	-	-	-
9.	ಯಲಬುರ್ಗಾ	-	-	-	-	-
	ಒಟ್ಟು	12	8	12	1	14

ಅಧ್ಯಕ್ಷರು:- ಮುಂದಿನಲಾಯಿತು. ಈಗ ನಿಯಮ 334 ರ ಮೇರೆಗೆ ಪ್ರಸ್ತಾಪಿಸಬೇಕಾದ ವಿಷಯಗಳು

ನಿಯಮ 334 ರ ಮೇರೆಗೆ

(1) ಶಾಸಕರಿಗೆ ಹೆಚ್ಚು ಎಲ್. ಪಿ. ಜಿ. ಕನೆಕ್ಷನ್ಸ್.

ಶ್ರೀ ರಾಮಲಿಂಗಾರೆಡ್ಡಿ:- (ಜಯನಗರ) :- ಮಾನ್ಯ ಅಧ್ಯಕ್ಷರೇ, ಸುಸತ್ ಸದಸ್ಯರಿಗೆ ವರ್ಷಕ್ಕೆ 48 ಎಲ್.ಪಿ.ಜಿ.ಯ ಸೌಲಭ್ಯಗಳನ್ನು ಒದಗಿಸಿದ್ದು ಶಾಸಕರಿಗೆ 5 ವರ್ಷ ಅವಧಿಗೆ ಕೇವಲ ಎರಡು ಎಲ್. ಪಿ. ಜಿ. ಗಳನ್ನು ಮಾತ್ರ ಒದಗಿಸಲಾಗಿದೆ. ಪ್ರತಿಯೊಬ್ಬ ಶಾಸಕರೂ ತಮ್ಮ ಕ್ಷೇತ್ರದಲ್ಲಿರುವ ಜನರಿಗೆ ಸಹಾಯ ಮಾಡುವ ದೃಷ್ಟಿಯಿಂದ ಪ್ರತಿ ವರ್ಷ ಎಲ್ಲಾ ಶಾಸಕರಿಗೂ 6 ಎಲ್.ಪಿ.ಜಿ.ಗಳನ್ನು ಶಾಸಕರು ತಿಳಿಸುವ ವ್ಯಕ್ತಿಗಳಿಗೆ ನೀಡುವಂತೆ ಆದೇಶ ಹೊರಡಿಸಲು ಸನ್ಮಾನ್ಯ ಆಹಾರ ಮತ್ತು ನಾಗರೀಕ ಸಚಿವರು ಕೇಂದ್ರಕ್ಕೆ ಒತ್ತಾಯ ಪಡಿಸಬೇಕೆಂದು ಕೋರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಆಹಾರ್ ಸಚಿವರು):- ಅಧ್ಯಕ್ಷರೇ, ಮೇಲ್ಕಂಡ ವಿಚಾರವನ್ನು ಮಾನ್ಯ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರ ಗಮನಕ್ಕೆ ತರುತ್ತೇನೆ.